**ಸಾಕ್ಷಿಗೆ ದಿನಾಂಕ: 12.03.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ RDB ರವರಿಂದಃ**

ನಾನು ಸಿಂಡಿಕೇಟ ಬ್ಯಾಂಕ ಜೊತೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ. ಸಿಂಡಿಕೇಟ ಬ್ಯಾಂಕನಲ್ಲಿ ನನ್ನ ಮಕ್ಕಳು ಸಾಲವನ್ನು ಪಡೆಯುವ ಸಮಯದಲ್ಲಿ ಸದರಿ ಸಾಲಕ್ಕೆ ನಾನು ಜಾಮೀನಾದರ ಅಂತಾ ಸಹಿ ಮಾಡಿರುತ್ತೇನೆ ಎಂದರೆ ನಿಜ. ಆ ಸಮಯದಲ್ಲಿ ಸಿಂಡಿಕೇಟ್ ಬ್ಯಾಂಕನಲ್ಲಿ ನನ್ನ ಹೆಸರಿನಲ್ಲಿ ಖಾತೆ ಸಹ ಇತ್ತು ಎಂದರೆ ನಿಜ.

ನಾನು ಹುಣಶ್ಯಾಳ ಇವರು ಮನೆಯನ್ನು ಯಾವ ವರ್ಷದಲ್ಲಿ ಖರೀದಿ ಪಡೆದಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಸದರಿ ಮನೆಯನ್ನು ಖರೀದಿ ಮಾಡಲು ಬೈಲಹೊಂಗಲಕ್ಕೆ ಹೋಗಿರುತ್ತೇನೆ. ಸದರಿ ಖರೀದಿ ಮಾಡಿಕೊಳ್ಳಲು ಬೈಲಹೊಂಗಲದ ನೊಂದಣಿ ಕಛೇರಿಗೆ ಯಾರು ಯಾರು ಹೋಗಿದ್ದೀರಿ ಎಂದರೆ ಸಾಕ್ಷಿಯು ನಾನು, ಕೊಡುವವರು ಹಾಗೂ ಇನ್ನಿತರರು ಹೋಗಿದ್ದೇವು ನಿಖರವಾಗಿ ಈಗ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ಹೀಗೆ ಬೈಲಹೊಂಗಲಕ್ಕೆ ಹೋದ ಸಮಯದಲ್ಲಿ ಸದರಿ ಖರೀದಿ ಪತ್ರವನ್ನು ದಸ್ತು ಬರಹಗಾರರ ಹತ್ತಿರ ತಯಾರಿಸಿರುತ್ತೇವೆ ಎಂದರೆ ನಿಜ.

2003 ರಲ್ಲಿ ನಮ್ಮ ಮನೆಯನ್ನು ಶಿಗನಹಳ್ಳಿ ಮಾರಾಟ ಮಾಡುವ ಸಮಯದಲ್ಲಿ ಬೈಲಹೊಂಗಲ ನೊಂದಣಿ ಕಛೇರಿಗೆ ಹೋಗಿರುತ್ತೇವೆ ಎಂದರೆ ನಿಜ. ಆ ಸಮಯದಲ್ಲಿ ಬೈಲಹೊಂಗಲದಲ್ಲಿರುವ ಕರ್ಜಗಿ ಎಂಬ ದಸ್ತು ಬರಹಗಾರರ ಹತ್ತಿರ ಸದರಿ ಖರೀದಿಗೆ ಸಂಬಂಧಿಸಿದಂತೆ ಪತ್ರ ತಯಾರಿಸಿರುತ್ತೇವೆ ಎಂದರೆ ನಿಜ.

ನನ್ನ ಜೀವಮಾನದಲ್ಲಿ ಹುಣಶ್ಯಾಳ ಅವರ ಮನೆಯನ್ನು ಮಾತ್ರ ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಮನೆ ಹಾಗೂ ಒಂದು ಜಾಗವನ್ನು ಸಹ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಜಾಗವನ್ನು ಯಾರ ಹೆಸರಿನಲ್ಲಿ

ಖರೀದಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಮಗನ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಜಾಗವನ್ನು ನನನ ಮಗನ ಹೆಸರಿನಲ್ಲಿ ಖರೀದಿ ಮಾಡುವ ಸಮಯದಲ್ಲಿ ಯಾವುದೇ ಮನೆ ಇರಲಿಲ್ಲ. 2010 ರಲ್ಲಿ ಮನೆ ಖರೀದಿ ಮಾಡಿರುತ್ತೇನೆ ಎಂದು ವಕೀಲರಿಗೆ ಮಾಹಿತಿ ನೀಡಿ ಬರೆಯಿಸಿರುತ್ತೇನೆ ಎಂದರೆ ಸಾಕ್ಷಿಯು ಜಾಗವನ್ನು ಖರೀದಿ ಮಾಡಿರುತ್ತೇನೆ ಎಂದು ಬರೆಯಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು 2010 ರಲ್ಲಿ ಮನೆ ಖರೀದಿ ಮಾಡಿರುತ್ತೇನೆ ಎಂದು ನಾನು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಜಾಗವನ್ನು ಖರೀದಿ ಮಾಡಿ ಮನೆಯನ್ನು ಕಟ್ಟಿಸಿರುತ್ತೇನೆ ಎಂದು ಹೇಳಿ ಮಾಹಿತಿ ನೀಡಿರುತ್ತೇನೆ ಎಂದು ಹೇಳುತ್ತಾರೆ. ಜಾಗವನ್ನು ಖರೀದಿ ಮಾಡಿ ನಂತರ ಮನೆಯನ್ನು ಕಟ್ಟಿಸಿರುತ್ತೇನೆ ಎಂದು ಬರೆಯಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಜಾಗದಲ್ಲಿ ಕಟ್ಟಿದ ಮನೆಯ ನಂಬರ ನನಗೆ ಈಗ ನೆನಪಿಲ್ಲ. ಸದರಿ ಜಾಗವನ್ನು ನನ್ನ ಮಗನ ಹೆಸರಿನಲ್ಲಿ ಖರೀದಿ ಮಾಡುಲು ನನ್ನ ಮಗ ಹಾಗೂ ಇನ್ನಿತರರ ಹೋಗಿರುತ್ತಾರೆ, ನಾನು ಹೋಗಿರಲಿಲ್ಲ ಆದರೆ ಹಣವನ್ನು ನಾನೇ ಕೊಟ್ಟು ಕಳುಹಿಸಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಖರೀದಿ ಪತ್ರವನ್ನು ಯಾರು ಬರೆದಿರುತ್ತಾರೆ ಹಾಗೂ ಯಾರು ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಜಾಗವನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ಮಗನಿಗೆ ನಾನು ರೂ.70,000/- ಗಳನ್ನು ಕೊಟ್ಟಿರುತ್ತೇನೆ. ಸದರಿ ಹಣವನ್ನು ನನ್ನ ವ್ಯಾಪಾರದಿಂದ ಕೂಡಿಟ್ಟ ಹಣ ಹಾಗೂ ಮಾರ್ವಾಡಿಯವರಿಗೆ ಕೊಡಬೇಕಾದ ಹಣವನ್ನು ತಡವಾಗಿ ನೀಡಿದರೆ ಆಯಿತು ಎಂದು ಸದರಿ ಹಣವನ್ನು ಸೇರಿಸಿ ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಆದರೆ ಬ್ಯಾಂಕನಿಂದ ಕೊಟ್ಟಿರುವುದಿಲ್ಲ. ನಾನು ನನ್ನ ಮಗನಿಗೆ ಹಣವನ್ನು ಕೊಡುವ ಸಮಯದಲ್ಲಿ ನಾರಾಯಣ ಪದಕಿ ಎಂಬುವವರ ಹಾಜರಿದ್ದರು. ಸದರಿ ನಾರಾಯಣ ಪದಕಿ ಇವರು ಸಹ ಖರೀದಿ ಮಾಡಿಕೊಳ್ಳಲು ಹೋಗಿರುವುದಿಲ್ಲ. ಸದರಿ ಜಾಗವನ್ನು ಯಾವ ದಿನಾಂಕದಂದು ಕೊಟ್ಟಿರುತ್ತೇನೆ ಹಾಗೂ ಯಾವ ದಿನಾಂಕದಂದು ಖರೀದಿ ಮಾಡಿಕೊಂಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಸದರಿ ಜಾಗವನ್ನು ರಾಮನಗೌಡ ಇವರಿಂದ ಖರೀದಿ ಮಾಡಿರುತ್ತೇವೆ. ಸದರಿ

ಜಾಗವನ್ನು ಖರೀದಿ ಮಾಡಲು ನಾನು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಹಾಗೂ ಸದರಿ ಜಾಗವನ್ನು ಯಾರು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಾಗವನ್ನು ಖರೀದಿ ಮಾಡುವ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

2003 ರಲ್ಲಿ ಶಿಗನಹಳ್ಳಿಯವರಿಗೆ ಮನೆ ಮಾರಾಟ ಮಾಡಿದ್ದರಿಂದ ಅಲ್ಲಿರುವ ನಮ್ಮ ಅಂಗಡಿ ಬಂದ ಆಗಿರುತ್ತದೆ ಹಾಗೂ ನನ್ನ ವ್ಯಾಪಾರ ಸಹ ಬಂದ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮನೆ ನಂ. 953 ನ್ನು ನನ್ನ ಮಗ ನನ್ನಿಂದ ಬರೆಯಿಸಿಕೊಂಡಿರುತ್ತಾರೆ ಎಂಬ ಕುರಿತು ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಖರೀದಿ ಪತ್ರವನ್ನು ಹಾಜರುಪಡಿಸದೇ ಇದ್ದರೂ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ನನಗೆ ಮೋಸ ಮಾಡಿ ಬರೆದುಕೊಂಡಿರುತ್ತಾನೆ ಎನ್ನಲಾದ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು 2003 ರಲ್ಲಿ ಶಿಗನಹಳ್ಳಿ ಇವರಿಗೆ ನನ್ನ ಮನೆಯನ್ನು ಮಾರಾಟ ಮಾಡಿದ ಹಣದಿಂದ 2005 ಹಾಗೂ 2007 ರಲ್ಲಿ ನನ್ನ ಹೆಣ್ಣು ಮಕ್ಕಳ ಮದುವೆ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಹಣದಿಂದ ನನ್ನ ಹೆಣ್ಣು ಮಕ್ಕಳ ಮದುವೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಹೆಣ್ಣುಮಕ್ಕಳ ಮದುವೆಯನ್ನು ಸಾಧಾರಣವಾಗಿಯೇ ಮಾಡಿರುತ್ತೇನೆ ಆದರೆ ಸಾಲವನ್ನು ಮಾಡಿ ನನ್ನ ಹೆಣ್ಣು ಮಕ್ಕಳ ಮದುವೆಯನ್ನು ಮಾಡಿರುವುದಿಲ್ಲ.

1990 ರಲ್ಲಿ ನಾನು ಇನ್ಸೂರೇನ್ಸ ಕಂಪನಿಯಲ್ಲಿ ಸಾಲ ಮಾಡಿದ್ದು ಅದನ್ನು ಮರು ಪಾವತಿ ಮಾಡದೇ ಇರುವುದರಿಂದ ಸದರಿ ಕಂಪನಿಯಿಂದ ಸಾಲ ಕಟಬಾಕಿ ಆದ ಬಗ್ಗೆ ನೋಟೀಸ ಬಂದಿರುತ್ತದೆ ಎಂದರೆ ಸಾಕ್ಷಿಯು ನೋಟಿಸ ಬಂದಿರುತ್ತದೆ ಆದರೆ ಕಟಬಾಕಿ ಆಗಿರಲಿಲ್ಲ ಎಂದು ಹೇಳುತ್ತಾರೆ. ದಿಃ 16.08.1997 ರಂದು ಇನ್ಸೂರೆನ್ಸ ಕಂಪನಿಯಿಂದ ನನಗೆ ಒಂದು ನೋಟೀಸ ಬಂದಿರುತ್ತದೆ ಎಂದರೆ

ಸರಿಯಲ್ಲ. ಸದರಿ ನೋಟೀಸನ್ನು ನನ್ನ ಮಗನಿಗೆ ಕೊಟ್ಟು ಅದನ್ನು ನನ್ನ ಮಗನಿಂದ ಸಾಲವನ್ನು ಮರು ಪಾವತಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನೇ ಮರು ಪಾವತಿ ಮಾಡಿರುತ್ತೇನೆ ಎಂದು ಹೇಳುತ್ತಾರೆ.

ಚಿಕ್ಕಮಠ ಎಂಬ ಹವಾಲ್ದಾರ ರವರ ಪರಿಚಯ ಇದೆ. ಅದೇ ರೀತಿ ಮೆಟ್ಟಿಮನಿ ಎಂಬ ವೈದ್ಯರ ಪರಿಚಯ ಸಹ ಇತ್ತು. ಲಕ್ಷ್ಮಣ ಪತಂಗೆ ನನ್ನ ಅಣ್ಣನ ಮಗ. ಶ್ರೀನಾಥ ಎಂಬ ಇನ್ಸೂರೇನ್ಸ ಕಂಪನಿಯ ನೌಕರ ಸಹ ಪರಿಚಯ ಇತ್ತು. ಸದರಿ ಎಲ್ಲರೂ ಸೇರಿ ನಮ್ಮ ಮನೆತನದ ಮರ್ಯಾದೆ ಹೋಗುತ್ತದೆ ಎಂದು ಹೇಳಿ ಇನ್ಸೂರೆನ್ಸ ಕಂಪನಿಯಲ್ಲಿ ಮಾಡಿದ ಸಾಲವನ್ನು ನನ್ನ ಮಗನಿಂದ ದಿಃ 03.09.1997 ರಂದು ಮರು ಪಾವತಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಮರು ಪಾವತಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಹೀಗೆ ನನ್ನ ಮಗ ಸದರಿ ಸಾವಲನ್ನು ಮರು ಪಾವತಿ ಮಾಡಿದ ಕಾರಣ ನನ್ನ ಮನೆ ನಂ. 953 ನ್ನು ನನ್ನ ಮಗನ ಹೆಸರಿಗೆ ಖರೀದಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಮೋಸ ಮಾಡಿ ಖರೀದಿ ಮಾಡಿಸಿಕೊಂಡಿರುತ್ತಾರೆ ಎಂದು  ಹೇಳುತ್ತಾರೆ. ನನಗೆ ದಸ್ತು ಬರಹಗಾರರದಾ ಕರ್ಜಗಿ ಇವರು ಪರಿಚಯಸ್ಥರಿಂದ್ದರಿಂದ ನಾನೇ ಸ್ವತಃ ಹೋಗಿ ಸದರಿ ಮನೆಗೆ ಸಂಬಂಧಿಸಿದದ ಖರೀದಿ ಪತ್ರವನ್ನು ತಯಾರಿಸಿ ನಾನೇ ಖರೀದಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ, ಆಲಿಸಿ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**